ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ: DCE/ITS/18/Biometric/2016-17.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 03/09/2016.

ಇವರಿಗೆ
M/s. Enterprise Software Solutions Lab Pvt. Ltd.,
No. 24, 23rd Main, Marenahalli
J.P.Nagar 2nd Phase
Bangalore 560 078.
**Ph. No.:080-26090500**

ಮಾನ್ಯರೆ

ವಿಷಯ: ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅನುಸ್ಥಾಪಿಸಿರುವ ಬಯೋಮೆಟ್ರಿಕ್ ಉಪಕರಣಗಳ ನಿರ್ವಹಣೆ ಬಗ್ಗೆ

ಉಲ್ಲೇಖ: 1. ಈ ಕಛೇರಿ ದಿ:28/09/2013ರ ಇ-ಟೆಂಡರ್ ಸಂ: DCE/ITS/21/Biometric/2013-14.
2. ಈ ಕಛೇರಿ ದಿ:03/03/2014ರ ಸರಬರಾಜು ಆದೇಶ ಸಂ: DCE/ITS/21/Biometric/2013-14.
3. ನಿಮ್ಮ ದಿನಾಂಕ:03/03/2014ರ ಕರಾರು ಒಪ್ಪಂದ

>>><<<

ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಕೇಂದ್ರಕಛೇರಿ/ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಹಾಗೂ 331 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಒಟ್ಟು 338 ವೆಬ್ ಆಧಾರಿತ ತಂತ್ರಾಂಶವಿರುವ Biometric Face Recognition Time Attendance System ಬಯೋಮೆಟ್ರಿಕ್ ಉಪಕರಣಗಳನ್ನು ತಾವು ಅನುಸ್ಥಾಪಿಸಿರುತ್ತೀರಿ.

ಟೆಂಡರ್ ಹಾಗೂ ಕರಾರು ಒಪ್ಪಂದದ ಷರತ್ತುಗಳನ್ವಯ ತಾವು ಸರಬರಾಜು ಮಾಡಿ ಅನುಸ್ಥಾಪಿಸಿರುವ Biometric Face Recognition Time Attendance System ಬಯೋಮೆಟ್ರಿಕ್ ಉಪಕರಣಗಳ ನಿರ್ವಹಣೆಯನ್ನು (Warranty) ಅನುಸ್ಥಾಪನಾ ದಿನಾಂಕದಿಂದ ಐದು ವರ್ಷಗಳ ಅವಧಿಗೆ ನಿರ್ವಹಿಸಬೇಕಿರುತ್ತದೆ. ಪ್ರತಿ ವರ್ಷದ ನಿರ್ವಹಣೆ ನಂತರ ಬಯೋಮೆಟ್ರಿಕ್ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಂಬಂಧಿಸಿದ ಕಾಲೇಜುಗಳ ದೃಢೀಕರಣದ ವರದಿಯನ್ನು ಸಲ್ಲಿಸಬೇಕಿರುತ್ತದೆ. ಆದರೆ ಇದುವರೆವಿಗೆ ಉಪಕರಣಗಳ ನಿರ್ವಹಣೆ ಬಗ್ಗೆ ದೃಢೀಕೃತ ವರದಿಯನ್ನು ಸಲ್ಲಿಸಿರುವುದಿಲ್ಲ.

ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಈ ಕೆಳಕಂಡ ಕಾಲೇಜುಗಳಲ್ಲಿ ತಾವು ಸರಬರಾಜು ಮಾಡಿ ಅನುಸ್ಥಾಪಿಸಿರುವ Biometric Face Recognition Time Attendance System ಬಯೋಮೆಟ್ರಿಕ್ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ ದೂರುಗಳನ್ನು ಸ್ವೀಕರಿಸಲಾಗುತ್ತಿದೆ.

| ಕ್ರ.ಸಂ. | ಕಾಲೇಜಿನ ಹೆಸರು |
|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿನಗರ, ಶಿವಮೊಗ್ಗ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡುವಲಹಿಪ್ಪೆ, ಹಾಸನ |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿಮೈಸೂರು, ಹಾಸನ ಜಿಲ್ಲೆ |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವೇಮಗಲ್, ಕೋಲಾರ |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರೋಣ |
| 6 | ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹೊಳೆನರಸೀಪುರ, ಹಾಸನ |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಸಳೆ ಹೊಸಹಳ್ಳಿ, ಹಾಸನ |
| 8 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುದೇರು, ಚಾಮರಾಜನಗರ |
| 10 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತ್ಯಾಮಗೊಂಡ್ಲು, ನೆಲಮಂಗಲ |

| ಕ್ರ.ಸಂ. | ಕಾಲೇಜಿನ ಹೆಸರು |
|---|---|
| 12 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು |
| 13 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಂಡಗೋಡು, ಉತ್ತರ ಕನ್ನಡ |
| 14 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ, ಹಾಸನ |
| 15 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ, ಮೈಸೂರು |
| 16 | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಮೈಸೂರು |
| 17 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮರಿಯಮ್ಮನಹಳ್ಳಿ, |
| 18 | ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ |
| 19 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುನ್ನೂರು, ಬಾಗಲಕೋಟೆ |
| 20 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು |
| 21 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಾಪಟ್ಟಣ, ದಾವಣಗೆರೆ |
| 22 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ |
| 23 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಚಿಕ್ಕಮಗಳೂರು |
| 24 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಳಕಲ್, ಹುನಗುಂದ ತಾ |
| 25 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು & ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ |
| 26 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಟ್ವಾಳ, ದಕ್ಷಿಣ ಕನ್ನಡ |
| 27 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಖರಾಯಪಟ್ಟಣ, ಚಿಕ್ಕಮಗಳೂರು |
| 28 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾವರ |
| 29 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ, ತುಮಕೂರು ಜಿಲ್ಲೆ |

**ಪ್ರಯುಕ್ತ ತುರ್ತಾಗಿ ಮೇಲ್ಕಂಡ ಕಾಲೇಜುಗಳಲ್ಲಿ ಅನುಸ್ಥಾಪಿಸಿರುವ ಬಯೋಮೆಟ್ರಿಕ್ ಉಪಕರಣಗಳ ದುರಸ್ತಿ ನಿರ್ವಹಣೆಯನ್ನು ಕೈಗೊಂಡು ಸಂಬಂಧಿಸಿದ ಅಧಿಕಾರಿಗಳ ದೃಢೀಕರಣದೊಂದಿಗೆ ವರದಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಿದೆ. ಹಾಗೂ ಉಳಿದ ಕಾಲೇಜು/ಕಛೇರಿಗಳಲ್ಲಿ ಅನುಸ್ಥಾಪಿಸಿರುವ ಬಯೋಮೆಟ್ರಿಕ್ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡುವಂತೆ ಸೂಚಿಸಿದೆ.**

(ಮಾನ್ಯ ಆಯುಕ್ತರ ಸೂಚನೆಯನ್ವಯ)

ತಮ್ಮ ವಿಶ್ವಾಸಿ

A. L. Muralidhara.

**ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು**

**ಪ್ರತಿಯನ್ನು**

1. *ಇಲಾಖಾವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ – ಅನುಸ್ಥಾಪಿಸಿರುವ ಬಯೋಮೆಟ್ರಿಕ್ ಉಪಕರಣಗಳ ದುರಸ್ತಿ ನಿರ್ವಹಣೆ ಸಂಬಂಧ ನೇರವಾಗಿ* ***M/s. Enterprise Software Solutions Lab Pvt. Ltd., Bangalore Ph No. 080-26090500*** ಇವರನ್ನು ಸಂಪರ್ಕಿಸಲು ಹಾಗೂ ಬಯೋಮೆಟ್ರಿಕ್ ಉಪಕರಣಗಳ ಕಾರ್ಯನಿರ್ವಹಣೆ ಬಗ್ಗೆ ದೃಢೀಕೃತ ವರದಿಯನ್ನು ಸಲ್ಲಿಸಲು ತಿಳಿಸಿದೆ.
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ತಮ್ಮ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅನುಸ್ಥಾಪಿಸಿರುವ ಬಯೋಮೆಟ್ರಿಕ್ ಉಪಕರಣಗಳ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ತಿಳಿಸಿದೆ.
3. ಕಛೇರಿ ಪ್ರತಿ.